ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ವಿಷಯ:** ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಶುಚಿಗಾರರ ಮಾಸಿಕ ಸಂಭಾವನೆಯನ್ನು ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:**
1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ವ್ಯ(ಔಬಾ)/ಬಿ23/7636/1980-81, ದಿನಾಂಕ: 06.08.2007.
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ವ್ಯ(ಔಬಾ)/ಬಿ14/68415/2017-18, ದಿನಾಂಕ: 28.03.2018.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 131 ಪಿಬಿಎಸ್ 2017 ಬೆಂಗಳೂರು, ದಿನಾಂಕ: 20.11.02018.
4. ಶ್ರೀ.ಜಗದೀಶ್ ಹಿರೇಮನಿ, ಗೌರವಾನ್ವಿತ ಸದಸ್ಯರು, ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗ, ಭಾರತ ಸರ್ಕಾರ, ನವದೆಹಲಿ ರವರ ಅಧ್ಯಕ್ಷತೆಯಲ್ಲಿ. ಕವಿಪ್ರನಿನಿ/ಎಸ್ಕಾಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಶುಚಿಗಾರರ (ಸ್ವಚ್ಛತಾ ಕೆಲಸಗಾರರು) ಸಮಸ್ಯೆಗಳ ಕುರಿತು ದಿನಾಂಕ: 07.03.2019 ರಂದು ನಡೆದ ಸಭೆಯ ನಡವಳಿ.

******

**<u>ಪ್ರಸ್ತಾವನೆ</u>:-**

ಕವಿಪ್ರನಿನಿ/ಎಸ್ಕಾಂಗಳಲ್ಲಿ ದಿನಾಂಕ: 31.03.2007 ಕ್ಕಿಂತ ಹಿಂದೆ ಗೊತ್ತುಪಡಿಸಿಕೊಂಡಿರುವ ಅರೆಕಾಲಿಕ ಶುಚಿಗಾರರಿಗೆ ಮಾಸಿಕ ಸಂಭಾವನೆಯನ್ನು ಕಾಲಕಾಲಕ್ಕೆ ಹೆಚ್ಚಿಸುತ್ತಾ ಬರಲಾಗಿದ್ದು, ಉಲ್ಲೇಖ-2ರ ಆದೇಶದಲ್ಲಿ ಕವಿಪ್ರನಿನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಶುಚಿಗಾರರಿಗೆ ದಿನಾಂಕ: 01.04.2018 ರಿಂದ ಜಾರಿಗೆ ಬರುವಂತೆ ಮಾಸಿಕ ಸಂಭಾವನೆಯನ್ನು ರೂ.7,500/- ರಿಂದ ರೂ.10,000/-ಕ್ಕೆ ಹೆಚ್ಚಿಸಲಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಪೀಲು ಸಂಖ್ಯೆ: 213/2013 ನ್ನು ಇತ್ಯರ್ಥಪಡಿಸಿ ನೀಡಿರುವ ಆದೇಶದ ಹಿನ್ನಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಇಡಿ 131 ಪಿಬಿಎಸ್ 2017 ಬೆಂಗಳೂರು ದಿನಾಂಕ: 20.11.2018 ರಲ್ಲಿ ವಿವಿಧ ಪ್ರಕಾರದ ತಾತ್ಕಾಲಿಕ, ಅರೆಕಾಲಿಕ, ಗುತ್ತಿಗೆ, ಪರಿಣಿತ, ಅರೆಪರಿಣಿತ ಕೆಳಹಂತದ ನೌಕರರನ್ನು ಒಳಗೊಂಡ ಎಲ್ಲಾ ನೌಕರರು ಕನಿಷ್ಠ ಮೂಲ ವೇತನಕ್ಕೆ ಅರ್ಹರು ಎಂದು ಕಾನೂನು ಇಲಾಖೆಯಿಂದ ಅಭಿಪ್ರಾಯ ಪಟ್ಟಿರುತ್ತದೆ ಎಂದು ತಿಳಿಸಿ ರಾಜ್ಯದ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಆಯಾಗಳ ಗೌರವಧನ್ನು ಮಾಸಿಕ **ರೂ.6,000/-** ಗಳಿಂದ **ರೂ.17,000/-** ಗಳಿಗೆ ಪರಿಷ್ಕರಿಸಿರುತ್ತದೆ.

ಶ್ರೀ.ಜಗದೀಶ್ ಹಿರೇಮನಿ, ಗೌರವಾನ್ವಿತ ಸದಸ್ಯರು, ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗ, ಭಾರತ ಸರ್ಕಾರ, ನವದೆಹಲಿ ರವರ ಅಧ್ಯಕ್ಷತೆಯಲ್ಲಿ ಕವಿಪ್ರನಿನಿ/ಎಸ್ಕಾಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಶುಚಿಗಾರರ (ಸ್ವಚ್ಛತಾ ಕೆಲಸಗಾರರು) ಸಮಸ್ಯೆಗಳ ಕುರಿತು, ದಿನಾಂಕ: 07.03.2019 ರಂದು ನಡೆದ ಸಭೆಯಲ್ಲಿ, ಕವಿಪ್ರನಿನಿ/ಎಸ್ಕಾಂಗಳಲ್ಲಿ ಖಾಯಂ ಶುಚಿಗಾರರಿಗೆ ವಿಸ್ತರಿಸುವ ವೇತನ ಶ್ರೇಣಿ **ರೂ.16370-35180** ರ ಕನಿಷ್ಠ ವೇತನ ರೂ.16370/-ನ್ನು ಅರೆಕಾಲಿಕ ಶುಚಿಗಾರರಿಗೂ (ಸ್ವಚ್ಛತಾ ಕೆಲಸಗಾರರಿಗೂ) ದಿನಾಂಕ: 01.04.2019 ರಿಂದ ಜಾರಿಗೆ ಬರುವಂತೆ ಪಾವತಿಸಲು ತೀರ್ಮಾನಿಸಲಾಗಿದೆ.

ಆದ್ದರಿಂದ ಈ ಕೆಳಕಂಡಂತೆ ಆದೇಶಿಸಿದೆ.

**ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ14/68415/2017-18,**

**ಬೆಂಗಳೂರು, ದಿನಾಂಕ:** - 2 MAY 2019

ಕವಿಪ್ರನಿನಿ/ಎಸ್ಕಾಂಗಳಲ್ಲಿ ದಿನಾಂಕ: **31.03.2007** ಕ್ಕಿಂತ ಹಿಂದೆ ಗೊತ್ತುಪಡಿಸಿಕೊಂಡು ನಿರಂತರವಾಗಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಶುಚಿಗಾರರಿಗೆ ಪ್ರಸ್ತುತ ಪಾವತಿಸುತ್ತಿರುವ ಮಾಸಿಕ ಸಂಭಾವನೆಯನ್ನು ದಿನಾಂಕ: **01.04.2019** ರಿಂದ ಜಾರಿಗೆ ಬರುವಂತೆ **ರೂ.10,000/-** ಗಳಿಂದ **ರೂ.16,370/-** ಗಳಿಗೆ ಪರಿಷ್ಕರಿಸಿ ಆದೇಶಿಸಿದೆ.

ಅರೆಕಾಲಿಕ ಶುಚಿಗಾರರ ಮಾಸಿಕ ಸಂಭಾವನೆ **ರೂ.15,000/-**ಕ್ಕಿಂತ ಕಡಿಮೆ ಇದ್ದಲ್ಲಿ ಮಾತ್ರ ಅವರುಗಳಿಗೆ ಇ.ಪಿ.ಎಫ್ ಕಡ್ಡಾಯವಾಗಿರುತ್ತದೆ. ಅರೆಕಾಲಿಕ ಶುಚಿಗಾರರಿಗೆ ಕನಿಷ್ಠ ವೇತನ **ರೂ.16,370/-** ಗಳನ್ನು ನಿಗದಿಪಡಿಸಿರುವ ಹಿನ್ನಲೆಯಲ್ಲಿ ಇ.ಪಿ.ಎಫ್ ಯೋಜನೆಯನ್ನು ಮುಂದುವರೆಸುವ ಅವಶ್ಯಕತೆ ಇರುವುದಿಲ್ಲ. ಆದಾಗ್ಯೂ, ಅರೆಕಾಲಿಕ ಶುಚಿಗಾರರ ಹಿತದೃಷ್ಟಿಯಿಂದ, ಅವರುಗಳು ಇ.ಪಿ.ಎಫ್ ಯೋಜನೆಯಲ್ಲಿ ಮುಂದುವರೆಯಲು ಲಿಖಿತ ರೂಪದಲ್ಲಿ ಇಚ್ಛಿತಾ ಪತ್ರಗಳನ್ನು ನೀಡಿದಲ್ಲಿ, ಇ.ಪಿ.ಎಫ್ ಯೊಜನೆಯನ್ನು ಮುಂದುವರೆಸುವುದು. ಒಂದು ವೇಳೆ ಅರೆಕಾಲಿಕ ಶುಚಿಗಾರರು ಇ.ಪಿ.ಎಫ್ ಯೋಜನೆಯಲ್ಲಿ ಮುಂದುವರೆಯಲು ಇಚ್ಛಿತಾ ಪತ್ರಗಳನ್ನು ನೀಡದಿದ್ದಲ್ಲಿ, ಅವರಿಗೆ ಸಂಬಂಧಪಟ್ಟ ಇ.ಪಿ.ಎಫ್ ಯೋಜನೆಯನ್ನು ಅಂತ್ಯಗೊಳಿಸುವುದು.

ಅರೆಕಾಲಿಕ ಶುಚಿಗಾರರಿಗೆ ಸಂಬಂಧಪಟ್ಟಂತೆ ಇ.ಎಸ್.ಇ ಯೋಜನೆ ಯಥಾವತ್ತಾಗಿ ಮುಂದುವರೆಯುವುದು.

**"ನಿಗಮದ ನಿರ್ದೇಶಕರುಗಳ ಸಭೆಯ ಅನುಸಮರ್ಥನೆಗೆ ಒಳಪಟ್ಟಿರುತ್ತದೆ"**

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),**
**ಕವಿಪ್ರನಿನಿ.**

__ಪ್ರತಿಯನ್ನು ಮಾಹಿತಿಗಾಗಿ:-__

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ.
3. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂ.
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/(ಹಣಕಾಸು)/(ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು

__ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ **www.kptcl.com/eprasarana** ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ__

6. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಉಪಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
8. ಎಲ್ಲಾ ಲೆಕ್ಕಾಧಿಕಾರಿ, ಕವಿಪ್ರನಿನಿ/ಎಸ್ಕಾಂ.

__ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-__

1. ಶ್ರೀ.ರಾಮಕೃಷ್ಣಯ್ಯ.ಟಿ.ಆರ್, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು ಎಲ್ಲಾ ಎಸ್ಕಾಂಗಳು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಘ, ಬೆಂಗಳೂರು.